ಮಾನ್ಯ ಪರಮೇಶ್ವರ ನಾಯ್ಕ್‌ರವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಅವರು ಸಮಾಜದ ಕೆಲವು ಪ್ರಮುಖರನ್ನು ಕರೆದು ಇದರ ಬಗ್ಗೆ ಮಾತನಾಡಿ, ವಿಚಾರ ಮಾಡಿ, ಎನ್ನುವ ಮಾತನ್ನು ಹೇಳಿದ್ದರು. ನಾನು ಎಲ್ಲಾ ಪಕ್ಷದ ನಾಯಕರುಗಳ ಮತ್ತು ಸಮಾಜದ ನಾಯಕರುಗಳ ಜೊತೆಗೆ ಸಮಲೋಚನೆಯನ್ನು ಮಾಡಿ, ಒಂದು ಸಭೆಯನ್ನು ಕರೆದು ಆದಷ್ಟು ಬೇಗನೆ ಈ ತಾಂಡಗಳನ್ನು ಐಡೆಂಟಿಫೈ ಮಾಡುವಂಥದ್ದರ ಬಗ್ಗೆ, ಅಂದರೆ ಈ ಗ್ರಾಮೀಣ ಗ್ರಾಮಗಳಾಗಿ ಪರಿವರ್ತನೆ ಮಾಡುವಂತಹ ಕೆಲಸವನ್ನು ನಾವು ಮಾಡುತ್ತೇವೆಂಬ ವಿಚಾರವನ್ನು ನಾನು ಈ ಸದನದ ಗಮನಕ್ಕೆ ಈಗ ತರುತ್ತಿದ್ದೇನೆ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಮಂತ್ರಿಯವರು ಮಜಿರೆ ಗ್ರಾಮಗಳ ಬಗ್ಗೆ ಹೇಳಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆಯೂ ನಾನು ಗಮನಹರಿಸುತ್ತೇನೆ. ಇನ್ನು ಕೆಲವು ಸದಸ್ಯರುಗಳು ಕ್ಯಾಂಪ್ಸ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವುಗಳು ಈ ಗೈಡ್‌ಲೈನ್ಸ್‌ನಲ್ಲಿ ಬಂದರೆ ಅವುಗಳನ್ನು ಪರಿವರ್ತನೆ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

(ಪ್ರಶ್ನೆ ಸಂಖ್ಯೆ : 134(555) ಸಂಬಂಧಪಟ್ಟ ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ)

(ಉತ್ತರ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿಯಲ್ಲಿ ಸೇರಿಸಲಾಗಿದೆ.)

ಶ್ರೀ ಕೆ.ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಇದೆ.

ಅಧ್ಯಕ್ಷರು : ತಾವು ಈಗ ಸಭೆಗೆ ಬಂದಿದ್ದೀರಿ.

ಶ್ರೀ ಕೆ.ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಸಭೆಗೆ ಬಂದೆ.

ಅಧ್ಯಕ್ಷರು : ಆಯಿತು, ಪ್ರಶ್ನೆಯನ್ನು ಕೇಳಿ.

ಸಣ್ಣ ಕೈಗಾರಿಕೆಗಳಿಗೆ ನೀಡಬೇಕಾದ ಸಬ್ಸಿಡಿ ಹಣದ ಬಾಕಿ ಬಗ್ಗೆ

122 (650) : ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಬೆಳ್ಳಾವಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರದಿಂದ ಸಣ್ಣ ಕೈಗಾರಿಕೆಗಳಿಗೆ ನೀಡಬೇಕಾಗಿರುವ ಸಬ್ಸಿಡಿ ಹಣ ಬಾಕಿ ಎಷ್ಟಿದೆ;

ಆ) ಸಬ್ಸಿಡಿ ಹಣ ಸಣ್ಣ ಕೈಗಾರಿಕೆಗಳಿಗೆ ದೊರಕದೇ ಕೈಗಾರಿಕೆಗಳು ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಬಾಕಿಯಿರುವ ಸಬ್ಸಿಡಿ ಹಣವನ್ನು ಯಾವಾಗ ಉದ್ದಿಮೆದಾರರಿಗೆ ಪಾವತಿಸಲಾಗುವುದು;

ಈ) ಬಾಕಿ ಹಣವನ್ನು ಪಾವತಿಸಲು ಸರ್ಕಾರ ಏನಾದರೂ ಕಾಲಮಿತಿಯನ್ನು ನಿಗದಿಗೊಳಿಸಿದೆಯೇ;

ಉ) ಹಾಗಿದ್ದಲ್ಲಿ, ಯಾವಾಗ ಪಾವತಿಸಲಾಗುವುದು?

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ದಿನಾಂಕ: 31.3.2006ರ ಅಂತ್ಯಕ್ಕೆ ರೂ. 256.06 ಕೋಟಿಗಳ ಮಂಜೂರಾದ ಸಹಾಯಧನ ಕೈಗಾರಿಕೆಗಳಿಗೆ ಬಿಡುಗಡೆ ಮಾಡಲು ಬಾಕಿ ಇರುತ್ತದೆ.

ಆ) ಬಂದಿದೆ.

ಇ) 2005–06ನೇ ಸಾಲಿನಲ್ಲಿ ಒಟ್ಟು ರೂ.84.10 ಕೋಟಿ ಅನುದಾನವನ್ನು ಸಹಾಯಧನ ಮಂಜೂರಾದ ಕೈಗಾರಿಕಾ ಘಟಕಗಳಿಗೆ ಈಗಾಗಲೇ ಬಿಡುಗಡೆ ಮಾಡಲಾಗಿದೆ. ಬಾಕಿ ಉಳಿದಿರುವ ಸಹಾಯಧನವನ್ನು ಹಣಕಾಸು ಲಭ್ಯದ ಆಧಾರದ ಮೇಲೆ 2006–07ನೇ ಸಾಲು ಹಾಗೂ ನಂತರದ ಸಾಲಿನಲ್ಲಿ ಬಿಡುಗಡೆ ಮಾಡಲಾಗುವುದು.

ಈ) ಇಲ್ಲ.

ಉ) ಹಣಕಾಸು ಲಭ್ಯದ ಆಧಾರದ ಮೇಲೆ 2006–07ನೇ ಸಾಲು ಹಾಗೂ ನಂತರದ ಸಾಲಿನಲ್ಲಿ ಬಿಡುಗಡೆ ಮಾಡಲಾಗುವುದು.

ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೆ, 2005–06ನೇ ಸಾಲಿನಲ್ಲಿ 84ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ಅದಕ್ಕೆ ಸಂತೋಷ. ಆದರೆ ಬಾಕಿ ಇರುವಂತಹ ಹಣ ಸುಮಾರು 15ವರ್ಷಗಳಿಂದ ಇದೆ. ಆದುದರಿಂದ ಇದು ಯಾವ್ಯಾವ ವರ್ಷದಿಂದ ಬಾಕಿ ಇದೆ? ಇದು ಒಂದು ಉಪ ಪ್ರಶ್ನೆ. ಅದರಲ್ಲಿ ಅತಿ ಹಿಂದುಳಿದಂತಹ ಜಿಲ್ಲೆಯಲ್ಲಿ ಬರುವಂತಹ ಕೈಗಾರಿಕೆಗಳ ಸಬ್ಸಿಡಿ ಹಣ ಏನು ಇದೆ, ಅದನ್ನು ಯಾವಾಗ ಕೊಡುತ್ತಾರೆ? ಆ ಹಣ ಎಷ್ಟು ಇದೆ ಎನ್ನುವಂಥದ್ದು, ಮತ್ತೆ ನಮ್ಮ ತುಮಕೂರು ಜಿಲ್ಲೆ, ಇದು ಬಹಳ ಹಿಂದುಳಿರುವಂತಹ ಜಿಲ್ಲೆಯಾಗಿದೆ. ಈಗ ಸಬ್ಸಿಡಿಯಲ್ಲಿ ಬರುವಂತಹ ಹಣವನ್ನು ಕೈಗಾರಿಕೆಗಳಿಗೆ ಕೊಡುವಂಥಾದ್ದನ್ನು ಎಷ್ಟು ದಿವಸದಲ್ಲಿ, ಯಾವ ವರ್ಷದಲ್ಲಿ ಕೊಡುತ್ತಾರೆ ಎಂಬುದು ನನ್ನ ಪ್ರಶ್ನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, 1999 ರಿಂದ ದಿ: 31.3.06 ನೇ ದಿವಸದ ಅಂದರೆ ಈ ವರ್ಷದವರೆಗೂ, ಈಗ ಒಟ್ಟು ಬಾಕಿ ಇರುವಂತಹ ಹಣ 256 ಕೋಟಿ ರೂಪಾಯಿಗಳು. ಇದರಲ್ಲಿ 2005–06ನೇ ಸಾಲಿನಲ್ಲಿ 84.10ಕೋಟಿ ರೂಪಾಯಿಗಳಷ್ಟು ಹಣವನ್ನು ನಮ್ಮ ಸರ್ಕಾರ ಬಂದಕೂಡಲೇ ಮಾನ್ಯ ಆರ್ಥಿಕ ಮಂತ್ರಿಯವರು ಬಿಡುಗಡೆ ಮಾಡಿದ್ದಾರೆ. ಇನ್ನು 50 ಕೋಟಿ ರೂಪಾಯಿಗಳನ್ನು ಆದಷ್ಟು ಬೇಗ ಬಿಡುಗಡೆ ಮಾಡುತ್ತೇನೆಂಬ ಮಾತನ್ನು ಹೇಳಿದ್ದಾರೆ. ಇನ್ನು ತುಮಕೂರು ಜಿಲ್ಲೆಗೆ ಸಂಬಂಧಪಟ್ಟಹಾಗೆ ಇಲ್ಲಿಯ ತನಕ ಬಾಕಿ ಇರುವ ಹಣ 1,250 ಘಟಕಗಳಿಗೆ 20 ಕೋಟಿ ರೂಪಾಯಿಗಳು, ಈ ಹಣವನ್ನು ಕೂಡ, ಇದರಲ್ಲಿ ವಿಶೇಷವಾಗಿ ಕೋಳಿ layers and broilers ಇಟ್ಟಿಗೆ ಮತ್ತು ಸಿಲ್ಕ್ ಮತ್ತು ಟೆಕ್ಸ್‌ಟೈಲ್ಸ್ ಇವುಗಳಿಗೆ ಒಟ್ಟಾರೆ 20 ಕೋಟಿ ರೂಪಾಯಿಗಳು ಬಾಕಿ ಇದೆ. ಇದರ ಬಗ್ಗೆ ನಾವು ಆರ್ಥಿಕ ಇಲಾಖೆಗೆ ಪತ್ರವನ್ನು ಬರೆದಿದ್ದೇವೆ. ಆದಷ್ಟು ಬೇಗ ನಾವು ಈ ಹಣವನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ತಾವು ಈ ಶಾಸನ ಸಭೆಯಲ್ಲಿ ಹೇಳುತ್ತಿದ್ದೀರಿ. ನಿಮ್ಮ ಇಲಾಖೆಯಲ್ಲಿ ಪತ್ರದ ಕೆಳಗೆ ಬರೆದು ಕಳುಹಿಸಿದ್ದಾರೆ, ಇಟ್ಟಿಗೆ ಫ್ಯಾಕ್ಟರಿಗೆ, ಫೌಲ್ಟಿಗೆ ಸಬ್ಸಿಡಿ ಹಣವನ್ನು ಕೊಡುವುದಿಲ್ಲ, ಅದನ್ನು ಬಿಟ್ಟು ಸಬ್ಸಿಡಿ ಹಣವನ್ನು ಬಿಲ್ ಮಾಡಿ ಎಂದು ಹೇಳುತ್ತಾರೆ. ನಾವು ಇಲ್ಲಿ ಯಾರ ಮಾತನ್ನು ನಂಬಬೇಕು? ಇಲ್ಲಿ ನಾವು ಸುಮಾರು ಹತ್ತು ಬಾರಿ ಕೇಳಿದ್ದೇವೆ. poultry ಮತ್ತು brick industry consider ಮಾಡಿಯೆಂದು ಕೇಳಿದ್ದೇವೆ. ಸನ್ಮಾನ್ಯ ಉಪ ಮುಖ್ಯಮಂತ್ರಿಯವರು ಬಜೆಟ್ ಭಾಷಣವನ್ನು ಮಾಡಬೇಕಾದರೂ ಈ ಬಗ್ಗೆ ಒತ್ತಾಯ ಮಾಡಿದ್ದೇವೆ. ಇದುವರೆಗೂ ನೀವು ಮಾಡಲಿಲ್ಲ, ಇದರ ಜೊತೆಗೇ ಈಗ ಹೊಸದಾಗಿ ಕೊಟ್ಟಿರುವ ಸರ್ಕ್ಯೂಲರ್ ಪ್ರಕಾರ ಕೂಡ ಆ ಎರಡು ಘಟಕಗಳನ್ನು ಬಿಟ್ಟು ಎಂದು ಮಾಡಿದ್ದಾರೆ. Are you committed to the statement which you have made nor or not? ಅಷ್ಟು ಮಾತ್ರ ನಮಗೆ ಬೇಕು. ತಾವು ಈಗ ಅದನ್ನು ಸೇರಿಸಿ ಮಾಡುತ್ತೀರಾ ಅಥವಾ ಅದನ್ನು ಬಿಟ್ಟು ಮಾಡುತ್ತೀರಾ ಎಂಬುದನ್ನು ಹೇಳಬೇಕು. ತಾವು ಈಗ ಹೇಳುತ್ತಿದ್ದೀರಿ. ಸಿರಿಕಲ್ಚರ್ ನಮ್ಮ ಭಾಗದಲ್ಲಿ ಇವತ್ತು ನಿರ್ನಾಮವಾಗಿ ಹೋಯಿತು. ಇಲ್ಲಿ ಒಂದು ಕಂತು ಹಣವನ್ನು ಕೊಟ್ಟು, ಎರಡನೇಯ ಕಂತನ್ನು ಕೊಡುವುದಕ್ಕೆ, ಎರಡು ಮೂರು ವರ್ಷವಾದರೂ ಬಿಲ್ ಮಾಡಿಲ್ಲ. ತಾವು ದಯಮಾಡಿ ಇದರ ಬಗ್ಗೆ ಹೇಳಬೇಕು.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ, ತಾವು ಈಗ ಪ್ರಸ್ತಾಪ ಮಾಡಿದಂತೆ ಇಟ್ಟಿಗೆ ಮತ್ತು ಬ್ರಾಯ್ಲರ್ ಕೋಳಿಯ ಬಗ್ಗೆ ಇದ್ದಂಥ ಪ್ರಸ್ತಾವನೆ ಆರ್ಥಿಕ ಇಲಾಖೆಯಿಂದ ವಾಪಸ್ಸು ಬಂದಿದೆ. ಅದರ ಬಗ್ಗೆ ಪುನಃ ಪರಿಶೀಲನೆ ಮಾಡಿ, ಆ ಹಣವನ್ನು ಬಿಡುಗಡೆ ಮಾಡಬೇಕೆಂದು ನಾವು ಮನವಿಯನ್ನು ಮಾಡಿದ್ದೇವೆ. ಇದನ್ನು ಖಂಡಿತವಾಗಿಯೂ ಬಿಡುಗಡೆ ಮಾಡುತ್ತೇವೆ. ಇದಕ್ಕಾಗಿ ಒಟ್ಟಾರೆ 59 ಕೋಟಿ ರೂಪಾಯಿಗಳು ಬಾಕಿ ಇದೆ. ಈ ಹಣವನ್ನು ಖಂಡಿತವಾಗಿ ಈ ಇಟ್ಟಿಗೆ ಕೋಳಿ ಸಾಕಾಣಿಕೆಗೆ ನಾವು ಯಾವುದೇ ಕಾರಣಕ್ಕೂ ಇದನ್ನು ಕೊಡುವುದಿಲ್ಲವೆಂಬ ಪ್ರಶ್ನೆ ಇಲ್ಲ. ಇದನ್ನು ಖಂಡಿತವಾಗಿಯೂ ಕೊಡುತ್ತೇವೆ.

ಅಧ್ಯಕ್ಷರು : ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

(ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ) : ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 9ನೇ ಪಟ್ಟಿಯಲ್ಲಿರುವ 31 ಪ್ರಶ್ನೆಗಳ ಪೈಕಿ 25 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ. x (ಅನುಬಂಧ-I) ಅ)

ಅಧ್ಯಕ್ಷರು : ಮಂಡಿಸಲಾಯಿತು.

3. ವರದಿಗಳನ್ನೊಪ್ಪಿಸುವುದು

ಶ್ರೀ ಎನ್.ವೈ. ಗೋಪಾಲಕೃಷ್ಣ (ಉಪಾಧ್ಯಕ್ಷರು) : ಮಾನ್ಯ ಅಧ್ಯಕ್ಷರೆ, ನಾನು ಅರ್ಜಿಗಳ ಸಮಿತಿಯ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ) ಸಂಬಂಧಿಸಿದ ಎರಡನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.